ಜೆಎಸ್ಎಸ್ ಮಹಾವಿದ್ಯಾಪೀಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ–286

**26 ಫೆಬ್ರವರಿ 2022 * ಶನಿವಾರ * ಸಂಜೆ 6.00**

**827, ಜೆಎಸ್ಎಸ್ ಬಡಾವಣೆ, 2ನೇ ಹಂತ, ಲಲಿತಾದ್ರಿಪುರ, ಮೈಸೂರು 570 028**

**ದಿವ್ಯ ಆಶೀರ್ವಾದ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಅಧ್ಯಕ್ಷತೆ**

**ಶ್ರೀ ಎಸ್. ಪುಟ್ಟರಾಜಪ್ಪ**
ಅಧ್ಯಕ್ಷರು, ಜೆಎಸ್ಎಸ್ ಮಹಾವಿದ್ಯಾಪೀಠದ ನೌಕರರ ಗೃಹನಿರ್ಮಾಣ ಸಹಕಾರ ಸಂಘ, ಮೈಸೂರು

**ಉಪನ್ಯಾಸ**

**ಶ್ರೀ ಯೋಗೀಶ್**
ಕನ್ನಡ ಅಧ್ಯಾಪಕರು, ಜೆಎಸ್ಎಸ್ ಪಬ್ಲಿಕ್ ಶಾಲೆ, ಸಿದ್ಧಾರ್ಥನಗರ, ಮೈಸೂರು

**ವಿಷಯ: ವಚನಗಳಲ್ಲಿ ಧರ್ಮಸಂದೇಶ**

**ಭಜನೆ**

**ಶ್ರೀ ಶಿವರಾತ್ರೀಶ್ವರ ಭಜನಾ ಮಂಡಳಿ**
ಜೆಎಸ್ಎಸ್ ಬಡಾವಣೆ, 2ನೇ ಹಂತ, ಮೈಸೂರು

---

**ಪ್ರಾಯೋಜಕರು**

**ಶ್ರೀಮತಿ ಎಚ್.ಎಂ. ಕನ್ನಿಕಾ ಪರಮೇಶ್ವರಿ ಮತ್ತು ಶ್ರೀ ವೈ.ಎಂ. ವಿಶ್ವನಾಥ್**
ದ್ವಿ.ದ.ಸ., ಜೆಎಸ್ಎಸ್ ಔಷಧವಿಜ್ಞಾನ ಕಾಲೇಜು, ಮೈಸೂರು

**ತಮಗೆ ಆದರದ ಸ್ವಾಗತ**

**ಕೋವಿಡ್ 19ರ ಮಾರ್ಗಸೂಚಿಗಳನ್ನು ಪಾಲಿಸಲು ಕೋರಿದೆ**

ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದನಿಲಯಗಳು ಹಾಗೂ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕವೇ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಅವರು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮ ಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆಗಳ ಪ್ರಸಾರಕ್ಕಾಗಿ ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿ ಮುಂತಾದ ಹಲವಾರು ಸಂಸ್ಥೆಗಳ ಮೂಲಕ ಧರ್ಮದಾಸೋಹವನ್ನು ನಡೆಸುತ್ತಿದ್ದರು. 1986 ರಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳನ್ನು ಸ್ಥಾಪಿಸಿ ಆ ಚಿಂತನೆಗೆ ಹೊಸ ಆಯಾಮವನ್ನು ನೀಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ದಿನಾಂಕ 12.5.1996 ರಂದು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

**ಶ್ರೀ ಯೋಗೀಶ್‌ರವರು** ನಂಜನಗೂಡು ತಾಲ್ಲೂಕು ಚುಂಚನಹಳ್ಳಿಯವರು. ಯುವ ಲೇಖಕರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಮತ್ತು ಎಂಇಡಿ ಪದವಿ ಪಡೆದಿರುವರು. ಪ್ರಸ್ತುತ ಮೈಸೂರು ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ವ್ಯಾಕರಣ ಸಂಪದ, ಸ್ಪರ್ಧಾ ಸಂಪದ, ಕನ್ನಡ ಶಾಸನಗಳು, ಲಿಪಿಯ ಅಧ್ಯಯನ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಶಿಕ್ಷಕರ ಪುನಶ್ಚೇತನ ಶಿಬಿರ, ವಿಚಾರಗೋಷ್ಠಿಗಳಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದಾರೆ.

**ಶ್ರೀ ಎಸ್. ಪುಟ್ಟರಾಜಪ್ಪನವರು** ನಂಜನಗೂಡು ತಾಲ್ಲೂಕು ಜೀಮಾರಹಳ್ಳಿಯವರು. ಊಟಿ ಮತ್ತು ಮೈಸೂರು ಜೆಎಸ್‌ಎಸ್ ಔಷಧವಿಜ್ಞಾನ ಕಾಲೇಜುಗಳಲ್ಲಿ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಜೆ.ಪಿ.ನಗರದ ಶರಣ ವೇದಿಕೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಶ್ರೀ ವೈ.ಎಂ. ವಿಶ್ವನಾಥ್‌ರವರು** ಮೈಸೂರು ಜೆಎಸ್‌ಎಸ್ ಔಷಧವಿಜ್ಞಾನ ಕಾಲೇಜಿನಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಧರ್ಮಪತ್ನಿ ಶ್ರೀಮತಿ ಎಚ್.ಎಂ. ಕನ್ನಿಕಾ ಪರಮೇಶ್ವರಿ ಟಿ.ನರಸೀಪುರದಲ್ಲಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪುತ್ರಿಯರಾದ ಕು. ಚಂದನ ವಿಶ್ವನಾಥ್ ಹಾಗೂ ಕು. ಧನ್ಯಶ್ರೀ ವಿಶ್ವನಾಥ್ – ಇಬ್ಬರು ಹೆಣ್ಣು ಮಕ್ಕಳಿದ್ದಾರೆ.